**ಸಿಸಿ ಸಂಖ್ಯೆಃ 1102/2024**

**ಪಿ ಡಬ್ಲ್ಯೂಃ 1**

**ದಿನಾಂಕಃ 17.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್ ಎಮ್ ಎಮ್ ಅವರಿಂದಃ**

18. ನಮ್ಮ ಮನೆಗಳು ಗ್ರಾಮದ ಮದ್ಯದಲ್ಲಿ ಇವೆ. ಆರೋಪಿಯ ಮನೆ, ನಮ್ಮ ಮನೆಯಿಂದ 500 ಮೀ. ಅಂತರ ಇದೆ. ಆರೋಪಿಯ ತಂದೆ ಮತ್ತು 9 ಜನ ಮಕ್ಕಳು ಮತ್ತು ಕುಟುಂಬದ ಸದಸ್ಯರು ಒಟ್ಟಿಗೆ ವಾಸಿಸುತ್ತಿದ್ದಾರೆ ಎಂದರೆ ಸರಿ. ನನಗೆ ಅಂತ್ಯೋದಯ ಕಾರ್ಡ ಇದೆ. ಸದರಿ ಕಾರ್ಡನಲ್ಲಿ ನಾನು ಮತ್ತು ನನ್ನ ಹೆಂಡತಿ ಇದ್ದೇವೆ. ಸದರಿ ಕಾರ್ಡಗಳನ್ನು ಬಡ ಕುಟುಂಬಗಳಿಗೆ ಕೊಡುತ್ತಾರೆ ಎಂದರೆ ಸರಿ. ನಾನು ಇವತ್ತಿನವರೆಗೂ ಸಹ ಅದರ ಸೌಲಭ್ಯ ಪಡೆಯುತ್ತಿದ್ದೇನೆ ಎಂದರೆ ಸರಿ.

19. ಆರೋಪಿ ಹಣ ಕೇಳಿದ ನಂತರ 2 ದಿನ ಬ್ಯಾಂಕುಗಳು ಬಂದ ಇದ್ದ ಕಾರಣ ಮತ್ತು ಆಕಡೆ, ಈಕಡೆ ಹಣ ಬರಬೇಕಾದ ಕಾರಣ 2 ದಿನ ಆದ ನಂತರ ಕೊಟ್ಟಿರುತ್ತೇನೆ. ರೂ.50000/- ಹಣ ಬ್ಯಾಂಕಿನಿಂದ, ಮನೆಯಲ್ಲಿದ್ದ ಸ್ವಲ್ಪ ಹಣ ಹಾಗೂ ಹೊರಗಡೆಯಿಂದ ಬಂದ ಸ್ವಲ್ಪ ಹಣ ಸೇರಿಸಿ ಕೊಟ್ಟಿರುತ್ತೇನೆ. ರೂ.50000/- ಹಣವನ್ನು ಹನಮಸಾಗರದ ಎಸ್ ಬಿ ಐ ಬ್ಯಾಂಕನಿಂದ ಸೋಮವಾರ ಡ್ರಾ ಮಾಡಿರುತ್ತೇನೆ. ನನ್ನ ತಾಯಿ ಹತ್ತಿರ 50 ರಿಂದ 60 ಸಾವಿರ ಹಣ ಇತ್ತು, ಅದನ್ನು ಸೇರಿಸಿ ಕೊಟ್ಟಿರುತ್ತೇನೆ. ಕಬ್ಬು ಕಡಿಯುವ ಫ್ಯಾಕ್ಟರಿಯವರು ನನಗೆ 4 ಲಕ್ಷ ಹಣ ಕೊಟ್ಟಿದ್ದರು ಅದನ್ನು ಕೂಡಿಸಿ ಕೊಟ್ಟಿರುತ್ತೇನೆ. ಆ 4 ಲಕ್ಷ ಹಣವನ್ನು ನನ್ನ ಖಾತೆಗೆ 2024 ರಲ್ಲಿ ಜಮಾ ಮಾಡಿದ್ದರು, ಅದನ್ನು ನಾನು ತೆಗೆದು ಇಟ್ಟುಕೊಂಡಿದ್ದೆ. ಫ್ಯಾಕ್ಟರಿ ಅಕೌಂಟನಿಂದ ಮತ್ತು ಎಸ್ ಬಿ ಐ ಬ್ಯಾಂಕನಿಂದ ಹಣ ಡ್ರಾ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಆ ರೀತಿ ನನ್ನ ಬಳಿ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಆ ರೀತಿಯ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

20. ಅಷ್ಟು ಮೊತ್ತದ ಹಣ ಸಾಲ ಪಡೆಯಲು ಆತನ ತಂದೆ-ತಾಯಿ ಮತ್ತು ಹಿರಿಯರನ್ನು ಕರೆದುಕೊಂಡು ಬರಲು ನಾನು ಆರೋಪಿಗೆ ಹೇಳಿಲ್ಲ. ಹಣ ಕೊಡುವಾಗಲೂ ಸಹ ಹಿರಿಯರನ್ನು

ಮತ್ತು ಕುಟುಂಬ ಸದಸ್ಯರನ್ನು ಕರೆದುಕೊಂಡು ಬಂದು ತೆಗೆದಿಕೊ ಎಂದು ನಾನು ಹೇಳಿಲ್ಲ. ಆ ರೀತಿ ವ್ಯವಹಾರ ಮಾಡುವ ಆರ್ಥಿಕ ಶಕ್ತಿ ನನ್ನಲ್ಲಿ ಇಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಹತ್ತಿರ ಆ ರೀತಿ ಹಣ ಕೇಳಿಲ್ಲ ಎಂದರೆ ಸರಿಯಲ್ಲ. ನಾನು 5 ಲಕ್ಷ ನಗದು ಹಣ ಆರೋಪಿಗೆ ಕೊಟ್ಟಿಲ್ಲ ಹಾಗೂ ಆರೋಪಿ ಆ ರೀತಿ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. 5 ಲಕ್ಷ ಹಣವನ್ನು ಬೆಳಿಗ್ಗೆ 10.30 ರಿಂದ 11.00 ಗಂಟೆ ಸುಮಾರಿಗೆ ಸೋಮವಾರ ನನ್ನ ಮನೆಯಲ್ಲಿ ಆರೋಪಿಗೆ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ನಾನು, ನನ್ನ ಹೆಂಡತಿ, ನನ್ನ ತಾಯಿ ಮತ್ತು ಆರೋಪಿ ಹಾಗೂ ಆತನ ಹೆಂಡತಿ ಇದ್ದೇವು.

21. ನನ್ನ ಹಾಗೂ ಆರೋಪಿಯ ಕುಟುಂಬದ ನಡುವೆ ಆಸ್ತಿ ವಿಚಾರವಾಗಿ ವೈಶಮ್ಯ ಇದ್ದು, ಅದನ್ನು ತೀರಿಸುವ ಸಲುವಾಗಿ ಸುಳ್ಳು ಸಂಗತಿ ಹೇಳಿ ಆರೋಪಿಯ ವಿರುದ್ದ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಊರಲ್ಲಿ ರಾಜಕೀಯ ಮಾಡುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಆತನ ಹೆಂಡತಿ ಬಾಗಲಕೋಟೆಯಲ್ಲಿ 2024 ರಲ್ಲಿ ಕಬ್ಬು ಕಟಾವಿಗೆ ಹೋಗಿದ್ದರು ಎಂದರೆ ಸಾಕ್ಷಿಯು ಅವರು ಪ್ರತಿ ವರ್ಷ ಹೋಗುತ್ತಾರೆ ಎಂದು ನುಡಿಯುತ್ತಾರೆ. ಸರ್ಕಾರದ ಪ್ರಿ ಸ್ಕೀಮ್ ಸೌಲಭ್ಯ ಪಡೆಯಲು ಆರೋಪಿ ಮತ್ತು ಆತನ ಹೆಂಡತಿ ಬಿಪಿಎಲ್ ಕಾರ್ಡ ಮಾಡಿಸಲು ಕುಷ್ಟಗಿಗೆ ಬಂದಿದ್ದರು, ಆ ಸಮಯದಲ್ಲಿ ನಾನು ಅವರನ್ನು ಕರೆದು ರೇಶನ್ ಕಾರ್ಡ ಮಾಡಿಸುತ್ತೇನೆ ಎಂದು ಹೇಳಿ ಅವರಿಂದ ಮೋಸದಿಂದ ದಾಖಲೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ದಾಖಲೆಗಳು ರದ್ದಾದ ನಂತರ ದ್ವೇಷದಿಂದ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಈ ಕೇಸ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ನೊಟೀಸ ನೀಡಿ ಕೇಸ ಹಾಕಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು,ಕುಷ್ಟಗಿ**